6. Industrial suburb IInd stage.
7. West of Chord Road IIIrd stage.
8. West of Chord Road IVth stage.
9. Chandra layout
10. West of Chord Road IInd Stage IInd phase.
11. Improvement to Matadahalli
12. Pillanna Garden IIIrd stage.
13. Rajamahal Vilas IInd stage.
14. Hennur Bellary Road Ist stage.
15. East of N.G.E.E. Layout.
16. Banashankari IIIrd Stage.
17. J.P.Nagar Ist to VIth Phase

ಉದ್ಯೋಗ ವಯೋಮಿತಿ

2108 - ಶ್ರೀ ಎಸ್. ರುದ್ರಪ್ಪ (ಕುರುವೇಕೆರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1991-92ನೇ ಸಾಲಿನ ಆಯವ್ಯಯ ವೇಳೆಯಲ್ಲಿ ರಾಜ್ಯಪಾಲರ ಭಾಷಣದಲ್ಲಿ ಉದ್ಯೋಗದ ವಯೋಮಿತಿಯನ್ನು ಇನ್ನೂ ಮೂರು ವರ್ಷಗಳಿಗೆ ಹೆಚ್ಚಿಸುವುದಾಗಿ (ಗರಿಷ್ಟ ಮಿತಿ) ಉಲ್ಲೇಖಿಸಿರುವುದು ನಿಜವೇ ಇದನ್ನು ಅನುಷ್ಠಾನಗೊಳಿಸಲಾಗಿದೆಯೇ?*

ಆ) *ಇಲ್ಲದಿದ್ದಲ್ಲಿ ಕಾರಣವೇನು? ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು) :

ಅ) ಹೌದು. ನಿಯಮಗಳನ್ನು ತಿದ್ದುಪಡಿ ಮಾಡಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಸರ್ಕಾರಿ ನೌಕರರಿಗೆ ಸ್ವಯಂ ಚಾಲಿತ ಬಡ್ತಿ

2108 ಎ - ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರಿ ನೌಕರರಿಗೆ 15 ವರ್ಷಗಳಿಗೊಮ್ಮೆ ಸ್ವಯಂ ಚಾಲಿತ ಬಡ್ತಿ ನೀಡುವ ಬಗ್ಗೆ ಸರ್ಕಾರವು ತೀರ್ಮಾನಿಸಿರುವುದು ನಿಜವೇ., ಪದೋನ್ನತಿ ಬಡ್ತಿ ನೀಡುವ ಬಗ್ಗೆ ಸರ್ಕಾರದ ಆದೇಶ ಹೊರಡಿಸಿದೆಯೇ.,*

ಆ) *ಸರ್ಕಾರಿ ಆದೇಶ ಹೊರಡಿಸಲಾಗದಿದ್ದಲ್ಲಿ ಅದರ ನೀತಿ ನಿಯಮಾವಳಿಯನ್ನು ರೂಪಿಸಲಾಗಿದೆಯೇ. ಇಲ್ಲದಿದ್ದಲ್ಲಿ ಕಾರಣವೇನು, ಯಾವಾಗ ಜಾರಿಗೊಳಿಸುವಿರಿ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ಹೌದು. ಯೋಜನೆಯನ್ನು ಸರ್ಕಾರ ತತ್ವಶಃ ಒಪ್ಪಿ ಆದೇಶ ಹೊರಡಿಸಿದೆ.

ಆ) ಈ ಯೋಜನೆಯನ್ನು ಕಾರ್ಯಗತಗೊಳಿಸುವ ವಿಧಾನವನ್ನು ರೂಪಿಸಲಾಗುತ್ತಿದೆ. ಸಧ್ಯದಲ್ಲೇ ಆದೇಶ ಹೊರಡಿಸಲಾಗುವುದು.